ಓ ಎಸ್ ನಂ.27/2019

ಪಿ ಡಬ್ಲ್ಯೂ: 1

**ದಿ. 12-11-2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಬಿ.ಕೆ.ಪಿ ವಕೀಲರಿಂದ ಃ**

ನಾನು 5 ನೇ ತರಗತಿ ವರೆಗೆ ಓದಿರುತೇನೆ. ಇಂಗ್ಲಿಷ್ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . 7 ನೇ ಪ್ರತಿವಾದಿ ಸಂಬಂಧದಲ್ಲಿ ನನಗೆ ಮಾವನಾಗ ಬೇಕು. ನನ್ನ ಮಾವನಿಗೆ ಶಾಂತಮ್ಮ ಮತ್ತು ರುದ್ರಮ್ಮ ಎಂಬ ಇಬ್ಬರು ಹೆಂಡತಿಯರು. ಸದರಿ ಶಾಂತಮ್ಮ ಮತ್ತು ರುದ್ರಮ್ಮ ರವರ ತಂದೆಯ ಹೆಸರು ರಂಗಪ್ಪ. ರಂಗಪ್ಪನಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ . ರಂಗಪ್ಪನ ಸ್ವತ್ತುಗಳು ಶಾಂತಮ್ಮ ಮತ್ತು ರುದ್ರಮ್ಮರವರಿಗೆ ಬಂದಿರುತ್ತವೆ ಎಂದರೆ ಸರಿ . ಸದರಿ ಸ್ವತ್ತುಗಳನ್ನು 7 ನೇ ಪ್ರತಿವಾದಿ ಅನುಭವಿಸುತ್ತಿದ್ದಾರೆ ಎಂದರೆ ಸರಿ .

ಸರ್ವೇ ನಂ.25/2 ರ ಜಮೀನು 1978 ರಲ್ಲಿ ನನಗೆ ಮಂಜೂರಾಗಿತ್ತು . ಸದರಿ ಜಮೀನಿನ ಪೂರ್ವಕ್ಕೆ ಸರ್ವೇನಂ. 25 (ಹೊಸ ನಂ.71) ರಲ್ಲಿ ನ ನನ್ನದೇ ಜಮೀನು. ಪಶ್ಚಿಮಕ್ಕೆ ಲಕ್ಕಮ್ಮ ಜಮೀನು, ಉತ್ತರಕ್ಕೆ ಬಸಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಸಿರಿಯಪ್ಪನ ಜಮೀನು ಈ ರೀತಿ ಚೆಕ್ಕುಬಂದಿ ಇರುತ್ತದೆ. ನಿಪಿ-1 ರಲ್ಲಿ ಸದರಿ ಜಮೀನಿನ ಪೂರ್ವಕ್ಕೆ ಸರ್ವೇ ನಂ.71 ರ ಜಮೀನು ಎಂದು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಪಶ್ಚಿಮಕ್ಕೆ ಯಾರ ಜಮೀನು ಇರುತ್ತದೆ ಎಂದು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

1978 ರಲ್ಲಿ ಎಷ್ಟು ಜನಕ್ಕೆ ಸಾಗುವಳಿ ಚೀಟಿಯನ್ನು ನೀಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.25 ರ ಜಮೀನಿನ ಪಕ್ಕದಲ್ಲಿಯೇ 71 ರ ಜಮೀನು ಇರುತ್ತದೆ. ಸರ್ವೇ ನಂ.25 ರ ಜಮೀನಿನ ಸ್ಕೆಚ್ ನ್ನು ನೋಡಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸರ್ವೇ ನಂ.25 ರಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಪೋಡ್ ನಂಬರುಗಳನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ3 ರ ಪ್ರಕಾರ ಸರ್ವೇ ನಂ.25/2 ರಲ್ಲಿ ನೂರು ತೆಂಗಿನ ಗಿಡಗಳು ಇರುತ್ತವೆ ಎಂದರೆ ಸರಿ . ಸಾಕ್ಷಿ ಮುಂದುವೆರದು ಮುಂಚೆ ಇದ್ದವು ಈಗ ದಾಳಿಂಬೆ ಇರುತ್ತದೆ ಎಂದು ನುಡಿಯುತ್ತಾರೆ. ಈಗಲೂ ಸಹ ತೆಂಗಿನ ಗಿಡಗಳು ಇರುತ್ತವೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯಲ್ಲಿ ತೆಂಗಿನ ಗಿಡಗಳು ಇರುತ್ತವೆ ಎಂದರೆ ಇರಬಹುದು. 7 ನೇ ಪ್ರತಿವಾದಿಗೆ ಯಾವ ಸಾಲಿನಲ್ಲಿ ಜಮೀನು ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಅದಕ್ಕೂ ಮೊದಲು ರಾಜಣ್ಣ ಎಂಬುವವರಿಗೆ ಮಂಜೂರಾಗಿತ್ತು .

7 ನೇ ಪ್ರತಿವಾದಿಯಿ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವೆರದು ಸದರಿ ಜಮೀನು ನಮ್ಮ ಜಮೀನಿನ ಪಕ್ಕದಲಿ ಇಲ್ಲಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೀಡಿ ಭದ್ರಯೋಜನೆ ಅಡಿ ರೂಪಾಯಿ 55 ಲಕ್ಷ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ಅದು ಬೇರೆ ಜಮೀನಿಗೆ ಸಂಬಂಧಿಸಿದ ದುಡ್ಡು ಎಂದು ನುಡಿಯುತ್ತಾರೆ. ಸದರಿ ಜಮೀನು ನಾನು ಮತ್ತು ನಮ್ಮ ಅಣ್ಣ ಒಟ್ಟಿಗೆ ಇದ್ದಾಗ ಖರೀದಿಸಿದ್ದೇವು. ಸದರಿ ಜಮೀನಿನ ಸರ್ವೇ ನಂ.71 ಇರುತ್ತದೆ. ಸರ್ವೇ ನಂ.25/2 ರ ಜಮೀನು ಸರ್ವೇ ನಂ.71 ರ ಜಮೀನು ಎಂದು ಹೇಳಿ ಪಹಣಿ ಪತ್ರಿಕೆಯನ್ನು ತಿದ್ದು ಪಡಿ ಮಾಡಲು ಹೇಳಿ ರೂ.55 ಲಕ್ಷ ಹಣವನ್ನು ಪಡೆದಿರುತೇನೆ ಎಂದರೆ ಸರಿಯಲ್ಲ. ನಾನು ಸರ್ವೇ ನಂ25/2 ರ ಜಮೀನನ್ನು ಸರ್ವೇ ನಂ.71 ಎಂದು ತಿದ್ದು ಪಡಿ ಮಾಡಲು ಅರ್ಜಿ ನೀಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

ನಾನು ಸರ್ವೇ ನಂ.71 ರ ಜಮೀನಿಗೆ ಸಂಬಂಧಿಸಿದ ಪರಿಹಾರದ ಹಣವನ್ನು ಪಡೆದಿರುತ್ತೇನೆ. ಸರ್ವೇ ನಂ.25/2 ರ

ಜಮೀನು ಸರ್ವೇ ನಂ.71 ಆಗಿರುತ್ತದೆ ಎಂದು ರೂ.55 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿರಂಜನ ಮೂರ್ತಿ ಎಂಬುವವರ ನನ್ನ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ . ಸದರಿ ಪ್ರಕರಣದಲ್ಲಿ ಜಿಲ್ಲಾ ನ್ಯಾಯಲಯದಿಂದ ಜಾಮೀನು ಪಡೆದಿರುತ್ತೇನೆ ಎಂದರೆ ಸರಿ . ಉಪವಿಬಾಗ ಅಧಿಕಾರಿಗಳು ಸರ್ವೇ ನಂ.25/2 ರ ಜಮೀನು ಸರ್ವೇ ನಂ.71 ರ ಜಮೀನು ಅಗಿದೆಯೋ ಇಲ್ಲವೂ ಎಂದು ಪರಿಶೀಲಿಸಲು ಆದೇಶಿಸಿ ಕಡತವನ್ನು ತಹಶೀಲ್ದಾರರಿಗೆ ರವಾನಿಸಿರುತ್ತಾರೆ ಎಂದರೆ ಸರಿ . ಸದರಿ ಕಡತ ತಹಶೀಲ್ದಾರರಿಗೆ ತಲುಪಿದಾರ ಜಮೀನು ನನ್ನ ಹೆಸರಿಗೆ ಆಗಿರುತ್ತದೆ ಎಂದು ತಿಳಿಸಿ ಖಾತೆಯನ್ನು ನನ್ನ ಹೆಸರಿಗೆ ಅಕ್ರಮವಾಗಿ ಮಾಡಿಸಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ಸರ್ವೇ ನಂ.25/2 ರ ಜಮೀನು ಸರ್ವೇ ನಂ. 71 ರ ಜಮೀನಾಗಿ ಪರಿವರ್ತಿಸಿಲ್ಲ ಎಂದು ತಹಶೀಲ್ದಾರರು ಉಪವಿಭಾಗಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಆಗಿದೆ ಎನ್ನಲಾದ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲ ಎಂದು ತಹಶಿಲ್ದಾರರು ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 25/10 ರ ಜಮೀನು ಸರ್ವೇ ನಂ.71 ಇದ್ದು ಸದರಿ ಜಮೀನು ಇಲ್ಲಿಯ ವರೆಗೂ ತಳವಾರ್ ರಾಜಣ್ಣರವರ ಹೆಸರಿನಲ್ಲಿಯೇ ಇರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯಕ್ಕೆ ಸಮಯದ ಅಗತ್ಯತೆ ಇದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲಃ

(ತೆ.ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .